# ಎಸ್.ಮೂರ್ತಿ ಸೇರಿ ಮೂವರು ಅಧಿಕಾರಿಗಳ ಮೇಲೆ ಎಸಿಬಿ ದಾಳಿ

ಉದಯ 4/10/19

**ಬೆಂಗಳೂರು:** ಆದಾಯ ಮೀರಿ ಆಸ್ತಿಗಳಿಸಿದ ಆರೋಪದ ಮೇರೆಗೆ ವಿಧಾನಸಭೆ ಸಚಿವಾಲಯದ ಅಮಾನತುಗೊಂಡಿರುವ ಕಾರ್ಯದರ್ಶಿ ಎಸ್.ಮೂರ್ತಿ ಸೇರಿ ಮೂವರು ಸರ್ಕಾರಿ ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ದ ಅಧಿಕಾರಿಗಳು ಗುರುವಾರ ಬೆಳಗ್ಗೆ ಏಕಕಾಲಕ್ಕೆ ದಾಳಿ ನಡೆಸಿ ಅಪಾರ ಪ್ರಮಾಣದ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

ಎಸ್.ಮೂರ್ತಿ ಅವರಿಗೆ ಸೇರಿದ ಸದಾಶಿವನಗರದ ವಾಸದ ಮನೆ, ಎಚ್ಎಂಟಿ ಕಾಲೋನಿಯಲ್ಲಿರುವ ಮನೆ ಮತ್ತು ಓಂಶಕ್ತಿ ಅಪಾರ್ಟ್‌ಮೆಂಟ್‌ನಲ್ಲಿರುವ ಎರಡು ಫ್ಲಾಟ್ ಮತ್ತು ಕೊಡಗು ಜಿಲ್ಲೆ ಕೆ.ನಿಡುಗಣಿ ಗ್ರಾಮದಲ್ಲಿರುವ ಕಾಫಿ ತೋಟದ ಮೇಲೆ ದಾಳಿ ನಡೆಸಲಾಗಿದೆ.

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ಉಪ ವಿಭಾಗದ ಪಂಚಾಯತ್ ರಾಜ್ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ಹನುಮಂತಪ್ಪ ಅವರ ಹೊಸಕೋಟೆ ನಗರದಲ್ಲಿರುವ ವಾಸದ ಮನೆ ಹಾಗೂ ಹೂವಿನಹಡಗಲಿಯಲ್ಲಿರುವ ಕಚೇರಿ ಮತ್ತು ಎಸ್‌ಕೆಆರ್‌ಎಚ್ ಶಾಲೆ, ನಾಗತಿ ಬಸಾಪುರದ ಸುಮಿತ್ರೀ ಪತ್ತಿನ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್, ನಾಗತಿ ಬಸಾಪುರದಲ್ಲಿನ ಹಳೆ ಶಾಲೆ ಹಾಗೂ ಹೂವಿನ ಹಡಗಲಿಯಲ್ಲಿರುವ ಹಳೇ ಮನೆ ಮೇಲೆ ದಾಳಿ ನಡೆಸಲಾಗಿದೆ.

ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಉಪವಿಭಾಗದ ಪಂಚಾಯತ್ ರಾಜ್ ಎಂಜಿನಿಯರ್ ವಿಭಾಗದ ಕಿರಿಯ ಎಂಜಿನಿಯರ್(ರಾಜ್ಯ ಸರ್ಕಾರಿ ದಿನಗೂಲಿ) ವಿಜಯರೆಡ್ಡಿಗೆ ಸೇರಿದ ಹುಮ್ನಾಬಾದ್‌ನಲ್ಲಿರುವ ಮನೆ, ಕಚೇರಿ ಹಾಗೂ ನಿರ್ನಾ ಗ್ರಾಮದ ವಾಸದ ಮನೆ ಮತ್ತು ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಫಾರ್ಮ್‌ಹೌಸ್ ಮೇಲೆ ದಾಳಿ ನಡೆಸಲಾಗಿದೆ.

ಮುಂಜಾನೆ ಐದು ಗಂಟೆಯಿಂದ ಸಂಜೆ ನಾಲ್ಕು ಗಂಟೆವರೆಗೆ ಕಾರ್ಯಾಚರಣೆ ನಡೆಸಿದ ಎಸಿಬಿ ಅಧಿಕಾರಿಗಳು ಆರೋಪಿತ ಸರ್ಕಾರಿ ಅಧಿಕಾರಿಗಳಿಗೆ ಸೇರಿದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.